**ದಿ:06-11-2025 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿನಾಂಕಃ 03.04.2021 ರಂದು ಸೆನ್ ಪೋಲೀಸ್ ಠಾಣೆಗೆ ಬೆಳಿಗ್ಗೆ 10-45 ಗಂಟೆಗೆ ನಾನು ಹಾಜರಾದ ಸಂದರ್ಭದಲ್ಲಿ ಇದೇ ಸಮಯದಲ್ಲಿ ಚಾಸಾ-4 ರವರು ಬಂದಿದ್ದು ಪರಸ್ಪರ ಪಿ ಐ ರವರು ನಮ್ಮ ವಿವರವನ್ನು ತಿಳಿಸಿ ಇದ್ದ ವಿಷಯ ತಿಳಿಸಿದರು. ಆ ವಿಷಯ ಏನೆಂದರೆ ಚಾಸಾ-1 ರವರು ಠಾಣೆಯಲ್ಲಿ ಇರುವಾಗ ನಗರದ ಬಾಡಾ ಕ್ರಾಸ್ ಹತ್ತಿರ ಇರುವ ಚಂದೊಳ್ಳಿ ಲೀಲ ರಂಗ ಲೋಕದ ಹಿಂಭಾಗದಲ್ಲಿ ಯಾರೋ ಇಬ್ಬರು ವ್ಯಕ್ತಿಗಳು ಗಾಂಜಾ ಮಾರಾಟ ಮಾಡುತ್ತಿದ್ದಾರೆ ದು ಮಾಹಿತಿ ಬಂದಿದ್ದು, ಸದರಿ ಮಾಹಿತಿಯನ್ನು ಖಚಿತಪಡಿಸಿಕೊಂಡು ದಾಳಿ ಮತ್ತು ಮುಂದಿನ ಕಾನೂನು ಕ್ರಮ ತೆಗೆದುಕೊಳುಳವ ಮೂಲಕ ಮೇಲಾಧಿಕ್ಷಕರಿಗೆ ವಿಷಯವನ್ನು ತಿಳಿಸಿ ಅಧಿಕಾರಿಗಳ ಮಾರ್ಗದರ್ಶನದಂತೆ ದಾಳಿ ಮಾಡಬೇಕಾಗಿದ್ದು ನೀವುಗಳು ಪಂಚರಾಗಿ ಸಹಕರಿಸಲು ಕೇಳಿಕೊಂಡಾಗ, ನಾವು ಅದಕ್ಕೆ ಒಪ್ಪಿಕೊಂಡೆವು ಅದರ ಬಾಬು ನಮಗೆ ಒಂದು ನೋಟೀಸನ್ನು ನೀಡಿದ್ದು, ಸದರಿ ನೋಟೀಸನ್ನು ನಾನು ನೋಡುತ್ತಿದ್ದು ಅದನ್ನು ನಿಪಿ-6 ಎಂದು ಅದರಲ್ಲಿ ನನ್ನ ಸಹಿಯನ್ನು 6(ಬಿ) ಎಂದು ಗುರುತಿಸುತ್ತೇನೆ. ನಂತರ ಪಿಐ ರವರು ಸ್ಥಳದಲಿಪ್ಲಿ ಇದ್ದ ಚಾಸಾ-4 ರವರಿಗೆ ಪತ್ರಾಂಕಿತರಾಗಿ ಸಹಕರಿಸಲು ಕೇಳಿಕೊಂಡಾಗ ಅವರು ಸಹ ಒಪ್ಪಿಕೊಂಡರು. ನಂತರ ನಾವುಗಳು, ಚಾಸಾ-4 ಮತ್ತು ಸಿಬ್ಬಂದಿಗಳಾದ ಚಾಸಾ-9 ಮತ್ತು ಚಾಸಾ-10 ರವರು ಪೋಲೀಸ್ ಠಾಣೆಯಿಂದ ಲ್ಯಾಪ್ ಟಾಪ್, ಪೋರ್ಟಬಲ್ ಪ್ರಿಂಟರ್, ಎಲ್ಕ್ಟ್ರಿಕ್ ತೂಕದ ಯಂತ್ರ, ಹ್ಯಾಂಡಿ ಕ್ಯಾಮೆರಾ, ತನಿಖಾ ಕಿಟ್ ನೊಂದಿಗೆ ವಾಹನ ಚಾಲಕ ಲಿಂಗರಾಜ್ / ಚಾಸಾ-11 ರವರು ಇದ್ದ ಇಲಾಖಾ ಜೀಪಿ} ಸಂಖ್ಯೆ ಕೆಎ -17/ಜಿ-0550 ರಲ್ಲಿ ನಾವುಗಳು ಹತ್ತಿಕೊಂಡೆವು. ನಂತರ ಚಾಸಾ-4 ರವರ ಸರ್ಕಾರಿ ವಾಹನ ಸಂಖೆಖ ಕೆಎ -17/ಜಿ-0551 ಇದರಲ್ಲಿ ಪೋಲೀಸ್ ಸಿಬ್ಬಂದಿಗಳಾಚ ಚಾಸಾ-5 ರಿಂದ 8

ರವರು ಹತ್ತಿಕೊಂಡು ಇದೇ ದಿನ ಬೆಳ್ಳಿಗ್ಗೆ 11-00 ಗಂಟೆಗೆ ಠಾಣೆಯನ್ನು ಬಿಟ್ಟು ಮಾಹಿತಿ ಇದ್ದ ಸ್ಥಳಕ್ಕೆ ಬೆಳಿಗ್ಗೆ 11-30 ಗಂಟೆಗೆ ಆವರಗೆರೆಯ ಗಣಪತಿ ದೇವಸ್ಥಾನದ ಹತ್ತಿರ ಹೋಗಿ ವಾಹನಗಳನ್ನು ಅಲ್ಲಿಯೇ 150 ಮೀಟರ್ ದೂರದಲ್ಲಿ ನಿಲ್ಲಿಸಿದೆವು. ನಂತರ ಚಾಸಾ-1 ರವರ ಸೂಚನೆ ಮೇರೆಗೆ ಪರಸ್ಪರ ಅಂಗಶೋಧನೆ ಮಾಡಬೇಕಾಗಿದ್ದು ಇವುಗಳಲ್ಲಿ ನಾನು ಎಲ್ಲಾ ಪೋಲೀಸ್ ಸಿಬ್ಬಂದಿಯ ಅಂಗ ಶೋಧನೆ ಮಾಡಿರುತ್ತೇನೆ. ನಂತರ ಚಾಸಾ-2 ರವರು ಚಾಸಾ-1 ಮತ್ತು 4 ರವರ ಅಂಗ ಶೋಧನೆಯನ್ನು ಮಾಡಲಾಯಿತು. ಯಾವುದೇ ಗಾಂಜಾ ಪದಾರ್ಥ ನಮ್ಮಲ್ಲಿ ಇರಲಿಲ್ಲ ಎಂದು ಖಚಿತಪಡಿಸಿಕೊಂಡರು. ನಂತರ ಮಾಹಿತಿ ಇದ್ದ ಸ್ಥಳದ ಕಡೆ ನಿಗಾವಹಿಸಿ ನೋಡಿದಾಗ ಇಬ್ಬರು ವ್ಯಕ್ತಿಗಳು ಚಿಂದೋಡಿ ಲೀಲಾ ಕಲಾ ಕ್ಷೇತ್ರದ ಹಿಂಭಾಗದ ಮಣ್ಣಿನ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಇದ್ದು, ಅವರಲ್ಲಿ ಒಬ್ಬ ಬಿಳಿ ಬಣ್ಣದ ಚೀಲವನ್ನು ಹಿಡಿದುಕೊಂಡಿದ್ದರು. ನಂತರ ಪೋಲೀಸರು ನಮ್ಮ ಸಮಕ್ಷಮ ಅವರ ಮೇಲೆ ದಾಳಿ ಮಾಡಿದಾಗ ಪೋಲೀಸರನ್ನು ನೋಡಿ ಅವರು ಓಡಿ ಹೋಗಲು ಪ್ರಾರಂಭಿಸಿದರು. ನಂತರ ಪೋಲೀಸರು ಇಬ್ಬರು ವ್ಯಕ್ತಿಗಳನ್ನು ಸುತ್ತುವರೆದು ಹಿಡಿದುಕೊಂಡರು. ನಂತರ ಚಾಸಾ-1 ರವರು ಇಬ್ಬರು ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ಕೇಳಿದಾಗ ಚೀಲ ಹಿಡಿದುಕೊಂಡವರು ತನ್ನ ಹೆಸರು ಅಂತರಾಮ್ ತಿರ್ಕಿ ತಂದೆ ಓಂ ಪ್ರಕಾಶ್ ತಿರ್ಕಿ, ಕ್ರಿಶ್ಚಿಯನ್ ಜನಾಂಗ, ರಾಯಗಡ ತಾಲ್ಲೂಕು, ಛತ್ತಿಸ್ ಗಡ ರಾಜ್ಯ ಎಂದು ತಿಳಿಸಿದ್ದು, ಹಾಲಿ ವಾಸ ಕೊಲ್ವ ಬೀಚ್ ಹತ್ತಿರ, ಮಡಗಾವ್, ಗೋವಾ ರಾಜ್ಯ ಎಂದು ತಿಳಿಸಿದರು. 2 ನೇ ವ್ಯಕ್ತಿಯ ಹೆಸರು ಕೇಳಿದಾಗ ತನ್ನ ಹೆಸರು ಮಧು ನಾಯ್ಕ ಬಿನ್ ನರಸಿಂಗ ನಾಯ್ಕು, ಲಂಬಾಣಿ ಜನಾಂಗ, ಹಣ್ಣಿನ ವ್ಯಾಪಾರ, ಬಂಡೆ ಬಸಾಪುರ ತಾಂಡಾ, ಕೂಡ್ಲಿಗಿ ತಾಲ್ಲೂಕು ಬಳ್ಳಾರಿ ಎಂದು ತಿಳಿಸಿದರು. ಹಾಲಿ ವಾಸಃ ಕೊಲ್ವ ಬೀಚ್ ಹತ್ತಿರ, ಮಡಗಾವ್, ಗೋವಾ ರಾಜ್ಯ ಎಂದು ತಿಳಿಸಿರುತ್ತಾರೆ.

3. ನಂತರ ಚಾ ಸಾ-1 ರವರು ಬಿಳಿ ಚೀಲದಲ್ಲಿ ಏನು ಇದೆ ಏನು ಇರುವುದಾಗಿ ಕೇಳಿದಾಗ ಅದರಲ್ಲಿ ಗಾಂಜಾ ಇದೆ ಅಂತ ಮಧುರಾಜ್ ರವರು (ಎ-2) ತಿಳಿಸಿರುತ್ತಾರೆ. ಎಲ್ಲಿಂದ ಆ ಗಾಂಜಾವನ್ನು ತಂದಿರುವುದಾಗಿ ವಿಚಾರಿಸಿದಾಗ ಗೊವಾ ರಾಜ್ಯದ ಕೊಲ್ವಾ ಬೀಚ್ ಹತ್ತಿರ ವಾಸ ಇರುವ ಅನಿಲ್ ಜಾಕೋಬ್ (ಆರೋಪಿ-3) ಎಂಬಾತ ಇದನ್ನು ಮಾರಲು ನಮಗೆ ಕೊಟ್ಟಿದ್ದು, ಮಾರಿದ ಹಣವನ್ನು ಅನಿಲ್ ಜೋಕೊಬ್ ಗೆ ಕೊಡುತ್ತಿದ್ದು ಅದರಲ್ಲಿ ಸ್ವಲ್ಪ ಹಣ ನಮಗೆ ಕೊಡುತ್ತಿದ್ದರು ಎಂದು ಹೇಳಿದರು. ಸದರಿ ಗಾಂಜಾವನ್ನು ನಾವು ಪಾಲೀಥೀನ್ ಕವರ್ ನಲ್ಲಿ ಹಾಕಿ 400 ರಿಂದ 500 ರೂಪಾಯಿಗೆ ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು. ನಂತರ ಚಾಸಾ-1 ರವರು ಬಿಳಿ ಚೀಲದಲ್ಲಿ ಏನು ಇದೆ ಎಂದು ನೋಡಿದಾಗ ಅದರಲ್ಲಿ ಬ್ರೌನ್ ಬಣ್ಣದ ಟೇಪಿನಿಂದ ಪ್ಯಾಕ್ ಮಾಡಿದ್ದ ಮೂರು ವಸ್ತುಗಳು ಇದ್ದು, ಇನ್ನೊಂದು ಬಿಳಿ ಬಣ್ಣದ ಬಟ್ಟೆಯಚೀಲದಲ್ಲಿ ಒಣ ಗಾಂಜಾ ಇದ್ದು ಅದರಿಂದ ಘಾಟು ವಾಸನೆ ಬರುತ್ತಿದ್ದು ಮತ್ತು ಬೀಜ, ಮೊಗ್ಗು ಮತ್ತು ಹೂವಿನಿಂದ ಕೂಡಿದ್ದು ವಾಸನೆ ಮತ್ತು ಅನುಭವದಿಂದ ಗಾಂಜಾ ಎಂದು ತಿಳಿದುಕೊಳ್ಳಲಾಯಿತು. ನಂತರ ಬ್ರೌನ್ ಕಲರ್ ಟೇಪಿನಿಂದ ಸುತ್ತಿದ್ದ ವಸ್ತುಗಳನ್ನು 1 ನೇ ಆರೋಪಿಯಿಂದ ಕತ್ತರಿಯಿಂದ ಕಟ್ ಮಾಡಿಸಿ ನೋಡಿದಾಗ ಅದರಲ್ಲಿ ಹೂವು, ಮೊಗ್ಗು ಮತ್ತು ಬೀಜದಿಂದ ಮಿಶ್ರಿತವಾದ ಒಣ ಗಾಂಜಾ ಇದ್ದು ಘಟು ವಾಸನೆ ಬರುತ್ತಿದ್ದರಿಂದ ಅದನ್ನು ಗಾಂಜಾ ಎಂದು ತಿಳಿಯಲಾಯಿತು. ನಂತರ ಚಾಸಾ-1 ರವರು ತಮ್ಮ ಸಿಬ್ಬಂದಿ ಚಾಸಾ-7 ರವರು ಮುಖಾಂತರ ಸದರಿ ವಸ್ತುಗಳನ್ನು ಠಾಣೆಯಿಂದ ತೆಗೆದುಕೊಂಡು ಬಂದಿದ್ದ ಎಲೆಕ್ಟ್ರಿಕ್ ತೂಕದ ಯಂತ್ರದಲ್ಲಿ ಒಂದೊಂದಾಗ ತೂಕ ಮಾಡಿದಾಗ ಮೊದಲನೆಯ ವಸ್ತು 2 ಕೆಜಿ 110 ಗ್ರಾಂ ಗಾಂಜಾ ಇದ್ದು, ಇದನ್ನು ಮಾರ್ಕರ್ ಪೆನ್ನಿಂದ ಕ್ರಮ ಸಂಖ್ಯೆ 1 ಅಂತ ಗುರುತು ನೀಡಲಾಯಿತು. ಇನ್ನೊಂದ 2 ಕೆ ಜಿ 215 ಗ್ರಾಂ ಗಾಂಜಾ ಇದ್ದು, ಇದನ್ನು ಮಾರ್ಕರ್ ಪೆನ್ನಿನಿಂದ ಕ್ರಮ ಸಂಖ್ಯೆ 2 ಅಂತ ಗುರುತು ಮಾಡಲಾಯಿತು. ಮೂರದನೇದನ್ನು ತೂಕ ಮಾಡಿ ನೋಡಿದಾಗ ಅದು 2 ಕೆಜಿ 185 ಗ್ರಾಂ ಗಾಂಜಾ ಇದ್ದು ಅದನ್ನು ಮಾರ್ಕರ್ ಪೆನ್ನಿನಿಂದ ಕ್ರಮ ಸಂಖ್ಯೆ

3 ಅಂತ ಗುರುತು ಮಾಡಲಾಯಿತು. ಇನ್ನೊಂದು ಬಿಳಿ ಬಟ್ಟೆ ಸಮೇತ ತೂಕ ಮಾಡಿದಾಗ 2 ಕೆ ಜಿ 90 ಗ್ರಾಂ ಗಾಂಜಾ ಇದ್ದು, ಇದನ್ನು ಮಾರ್ಕರ್ ಪೆನ್ನಿನಿಂದ ಕ್ರಮ ಸಂಖ್ಯೆ 4 ಅಂತ ಗುರುತು ಮಾಡಲಾಯಿತು. ಒಟ್ಟು 8 ಕೆಜಿ 600 ಗ್ರಾಂ ಗಾಂಜಾ ಇದ್ದು ಇದರ ಬೆಲೆ 2 ಲಕ್ಷದ 10 ಸಾವಿರ ಬೆಲೆ ಅಂದಾಜು ಮಾಡಲಾಯಿತು. ನಂತರ ಚಾಸಾ-1 ರವರು ಸದರಿ ಆರೋಪಿತರ ಅಂಗ ಶೋಧನೆಯನ್ನು ಮಾಡಬೇಕಾಗಿದ್ದು, ಅಂಗ ಶೋದನೆಯನ್ನು ನಾನು ಮಾಡಬಹುದಾ ಅಥವಾ ಪತ್ರಾಂಕಿತ ಅಧಿಕಾರಿ ಮಾಡಬಹುದಾ ಎಂದು ಕೇಳಿಕೊಂಡಾಗ ಆಗ ಆರೋಪಿತರು ಪತ್ರಾಂಕಿತ ಅಧಿಕಾರಿಗಳು ಅಂಗ ಶೋಧನೆ ಮಾಡಲು ಅನುಮತಿಯನ್ನು ನೀಡಿದರು. ಸಮ್ಮತಿ ಪತ್ರಕ್ಕೆ ತಮ್ಮ ಸಹಿ ಮಾಡಿರುತ್ತಾರೆ. ನಂತರ ಚಾಸಾ-1 ರವರು ಚಾಸಾ-4 ರವರಿಗೆ ಅಂಗ ಶೋಧನೆ ಮಾಡಲು ಕೋರಿಕೊಂಡಿದ್ದು, ಚಾಸಾ-4 ರವರು ಸಹ ಒಪ್ಪಿಕೊಂಡಿರುತ್ತಾರೆ. ಚಾಸಾ-4 ರವರು ತಮ್ಮ ಸಮಕ್ಷಮ ಆರೋಪಿತರ ಪೈಕಿ ಮಧುನಾಯ್ಕ (ಆರೋಪಿ-2) ರವರ ಅಂಗ ಶೋಧನೆಯನ್ನು ಮಾಡಿದಾಗ ಆತನ ಪ್ಯಾಂಟಿನ ಬಲ ಜೇಬಿನಲ್ಲಿ ಹಣ ಮತ್ತು ಪಾಲೀಥೀನ್ ಕವರ್ ಗಳು ಇದ್ದವು, ಅವುಗಳನ್ನು ನಮ್ಮ ಸಮಕ್ಷಮ ಏಣಿಕ ಮಾಡಿದಾಗ 100 ರೂಪಾಯಿ ಮುಖಬೆಲೆಯ 9 ನೋಟುಗಳು ಇದ್ದವು. 25 ಪಾಲೀದಿ..ನ್ ಕವರ್ ಗಳು ಇದ್ದವು. ಹಣದ ಬಗ್ಗೆ ಚಾಸಾ-1 ರವರು ಎ-2 ರವರಿಗೆ ಕೇಳಿದಾಗ ಗಾಂಜಾ ಮಾರಾಟ ಮಾಡಿದ ಹಣ ಎಂದು ತಿಳಿಸಿರುತ್ತಾರೆ. ನಂತರ ಚಾಸಾ-4 ರವರು 1 ನೇ ಆ್ರೋಪತನ ಅಂಗಶೋಧನೆ ಮಾಡಿದಾಗ ಗಾಂಜಾಕ್ಕೆ ಸಂಬಂಧಿಸಿದ ಯಾವುದೇ ವಸ್ತು ದೊರಕಿರುವುದಿಲ್ಲ. ಎ-1 ನ ಬಳಿ ಎಂ ಐ ಕಂಪನಿಯ ಕಪ್ಪು ಬಣ್ಣದ ಆಂಡ್ರಾಯ್ಡ್ ಮೊಬೈಲ್ ಫೋನ್ ದೊರೆತ್ತಿದ್ದು ಅದರಲ್ಲಿ ಏರ್ ಟೆಲ್ ಮತುತ ಜಿಯೊಐೀ ಕಂಪನಿಯ ಸಿಮ್ ಇದ್ದು, ಅವುಗಳನ್ನು ವಶಪಡಿಸಿಕೊಂಡಿದ್ದು, ನಂತರ ಎಲ್ಲಾ ಮುದ್ದೆಮಾಲುಗಳನ್ನು ಚಾಸಾ-7 ರವರ ಮುಖಾಂತರ ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿಸಿ ಸೇನ್ ಎಂದು ಅರಗಿನಿಂದ ಸೀಲು ಮಾಡಲಾಯಿತು. ನಂತರ ಚಾಸಾ-1 ರವರು ಚಾಸಾ-10 ರವರಿಂದ ಪ್ಯಾಕ್ ಮಾಡಿದ ಎಲ್ಲಾ ವಸ್ತುಗಳ ವಿವರಗಳನ್ನು ಹಾಗೂ

ಠಾಣೆಯ ಹೆಸರನ್ನು ಟೈಪ್ ಮಾಡಿಸಿ ಪ್ರಿಂಟ್ ತೆಗೆದು ನಮ್ಮಗಳ ಮತ್ತು ಚಾಸಾ-4 ರವರ ಹಾಗೂ ಆರೋಪಿಗಳ ಸಹಿಗಳನ್ನು ಪಡೆದು ಸೀಲು ಮಾಡಿದ ವಸ್ತುಗಳಿಗೆ ಅಂಟಿಸಲಾಯಿತು. ಸದರಿ ಮಹಜರು ಕ್ರಮವನ್ನು ನಮ್ಮಗಳ ಸಮಕ್ಷಮ ಹಾಗೂ ಚಾಸಾ-4 ರವರ ಸಮಕ್ಷಮ ಬೆಳಿಗ್ಗೆ 11-40 ರಿಂದ 1-30 ರ ವರಗೆ ಸ್ಥಳದಲ್ಲಿಯೇ ಚಾಸಾ-1 ರವರು ಚಾಸಾ-10 ರವರ ಮುಖಾಂತರ ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ಲ್ಯಾಪ್ ಟಾಪ್ ನಿಂದ ಟೈಪ್ ಮಾಡಿಸಿ ಪೊರ್ಟಬಬಲ್ ಪ್ರಿಂಟರ್ ನಿಂದ ಸರ್ಕಾರಿ ವಾಹನದ ಬ್ಯಾಟರಿ ಸಹಾಯದಿಂದ ಪ್ರಿಂಟ್ ತೆಗೆಯಲಾಯಿತು. ನಮ್ಮಗಳ, ಪಂಚರ, ಆರೋಪಿತರ ಹಾಗೂ ಚಾಸಾ-4 ರವರ ಸಹಿಗಳನ್ನು ಪಡೆಯಲಾಯಿತು. ಈಗ ತೋರಿಸಿದ ನಿಪಿ-12 ರಲ್ಲಿ ನನ್ನ ಸಹಿಯನ್ನು ನಿಪಿ-12(ಜಿ) ಎಂದು ಗುರುತಿಸಲಾಯಿತು.

4. ಆರೋಪಿ -1 ರವರಿಗೆ ಹಿಂದಿ ಭಾಷೆ ಬರುತ್ತಿದ್ದು ಕನ್ನಡ ಭಾಷೆ ಬರದೇ ಇರುವುದರಿಂದ ನನಗೂ ಮತ್ತು ಚಾಸಾ-4 ರವರಿಗೆ ಹಿಂದಿ ಮತ್ತು ಕನ್ನಡ ಭಾಷೆ ಬರುತ್ತಿದ್ದು, ಚಾಸಾ-1 ರವರು ಹೇಳಿದ ಹಾಗೆ 1 ನೇ ಆರೋಪಿಗೆ ನಾನು ಹಿಂದಿಯಲ್ಲಿ ವಿಚಾರಿಸಿ ಅದನ್ನು ಕನ್ನಡದಲ್ಲಿ ಟೈಪ್ ಮಾಡಿಸಿ ಕನ್ನಡದಲ್ಲಿ ಟೈಪ್ ಮಾಡಿದ್ದನ್ನು 1 ನೇ ಆರೋಪಿಗೆ ಹಿಂದಿಯಲ್ಲಿ ಅನುವಾದಿಸಿ ಹೇಳಿದೆನು. ಅದಕ್ಕೆ ಆವರು ಸರಿ ಇದೆ ಎಂದು ಒಪ್ಪಿದ್ದು ಸ್ಥಳದಲ್ಲಿಯೇ ಸಹಿ ಮಾಡಿರುತ್ತಾರೆ. ಆರೋಪಿಯ ಅಂಗಶೋಧನೆ ಮಾಡುವ ಕಾಲಕ್ಕೆ ಕನ್ನಡದಲ್ಲಿ ಅಂಗಶೋಧನೆ ನಾನು ಅಥವಾ ಪತ್ರಾಂಕಿತ ಅಧಿಕಾರಿಗಳು ಮಾಡಬೇಕಾ ಅಂತ ಹಿಂದಿಯಲ್ಲಿ ಅವರಿಗೆ ಕೇಳಿದ್ದು ಅದನ್ನು ಕನ್ನಡದಲ್ಲಿ ಅನುವಾಧಿಸಿ ಕನ್ನಡದಲ್ಲಿ ಬರೆದಿದ್ದನ್ನು ಹಿಂದಿಯಲ್ಲಿ ಅನುವಾದಿಸಿ ಆತನಿಗೆ ಹೇಳಿದೆನು. ಅದಕ್ಕೆ ಅವರು ಒಪ್ಪಿ ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ಕರಡು ನಕಾಶೆ ತಯಾರಿಸಿದ್ದು, ಅದನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು ಅದರಲ್ಲಿ ನನ್ನ ಸಹಿಯನ್ನು ನಿಪಿ-23(ಡಿ) ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವ ಕಾಲಕ್ಕೆ ಪೋಟೋಗಳನ್ನು ತೆಗೆದಿದ್ದು ಅವುಗಳು ನಿಪಿ-13 ರಿಂದ 21 ಅಂತ ಇರುತ್ತದೆ. ಸದರಿ ಪೋಟೋಗಳಲ್ಲಿ

ನಾನು, ಆರೋಪಿ ಗಾಂಜಾವನ್ನು ತೂಕ ಮಾಡುತ್ತಿದ್ದನ್ನು, ಮೇಲಾಧಿಕಾರಿಗಳು ಕಾಣುತ್ತಾರೆ. ಆ ವಸ್ತುಗಳು ವಶಪಡಿಸಿಕೊಂಡಿರುವ ವಸ್ತುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ಈಗಾಗಲೇ ಎಂಓ 1-8 ಎಂದು ಗುರುತಿಸಲ್ಪಟ್ಟಿದೆ(ಆರೋಪಿ ಪರ ವಕೀಲರು ವಸ್ತುಗಳ ಪೈಕಿ ಎಂಓ-5 ನ್ನು ಗುರುತಿಸಲು ತಕರಾರು ಏನೂ ಇಲ್ಲ ಎಂದು ಹೇಳಿರುತ್ತಾರೆ. ಆ ದಿನ ನಾವು ದಾಳಿ ಮಾಡಿದ ಸಮಯದಲ್ಲಿ ಇದ್ದಂತಹ ಮಧುರಾಜ್ ಆರೋಪಿಯನ್ನು ಈ ದಿನ ನಾನು ವಿ ಸಿ ಮುಖಾಂತರ ನೋಡುತ್ತಿದ್ದೇನೆ. (ಸದರಿ ಆರೋಪಿನಟಬ್ಬು  ಬಾಡಿ ವಾರಂಟ್ ಮೇಲೆ ಗೋವಾ ಜೆಸಿ ಎಂದು ವಿಸಿ ಮೂಲಕ ಹಾಜರುಪಡಿಸಲಾಯಿತು. 1 ನೇ ಆರೋಪಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ)

**ಪಾಟೀ ಸವಾಲುಃ ಶ್ರೀ ಕೆ.ಕೆ.., ವಕೀಲರಿಂದ ಆರೋಪಿತರ ಪರವಾಗಿ**:

5. ಮೌಖಿಕವಾಗಿ ದಾಳಿ ನಡೆಸಲು ಪಂಚರಾಗಿ ಹೋಗಲು ನಮ್ಮ ಮೇಲಾಧಿಕಾರಿಗಳು ನನಗೆ ಹೇಳಿದರು. ಆದರೆ ಲಿಖಿತವಾಗಿ ಆದೇಶ ಇರಲಿಲ್ಲ. ಬಾಡಾ ಕ್ರಾಸ್ ಬಳಿ ಇರುವ ಚಿಂದೋಡಿ ಲೀಲಾ ರಂಗ ಮಂದಿರದ ಎನ್ ಹೆಚ್ 48 ಹಾಗೂ ಹರಿಹರದ ಹೊರವಲಯದಲ್ಲಿರುವ ಎನ್ ಹೆಚ್ -48 ಸುಮಾರು 20 ಕಿಲೋಮೀಟರ್ ಅಂತರ ಇರುತ್ತದೆ ಎಂದರೆ ನಿಜ. ನನ್ನ ಮಾತೃ ಭಾಷೆ ಹಿಂದಿ, ಆದರಿಂದ ನನಗೆ ಕನ್ನಡ ಭಾಷೆ ಸರಿಯಾಗಿ ಬರುವುದಿಲ್ಲ ಎಂದರೆ ಸುಳ್ಳು, ಆದ್ದರಿಂದ ನಾನು ಕನ್ನಡಿದಿಂದ ಹಿಂದಿ ಭಷ್ಷಯಲಿ ಭಾಷಾಂತರ ಸರಿಯಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡಿರುವುದಾಗಿ ಹೇಳಲಾದ ಗಾಂಜಾದಲ್ಲಿ ಸೊಪ್ಪು ಹೂವು, ಕಾಂಡ, ಬೀಜ ಎಷ್ಟು ಪ್ರಮಾಣದಲ್ಲಿ ಇದ್ದವು ಅಂತ ಪ್ರತ್ಯೆಕವಾಗಿ ತೂಕ ಮಾಡಿಲ್ಲ. ಸೊಪ್ಪು ತುಂಬಲು ಉಪಯೋಗಿಸಿದ ಕವರ್ ಗಳು ಎಷ್ಟು ಗ್ರಾಂ ಅಂತ ತೂಕ ಮಾಡಿಲ್ಲ. ಚಾಸಾ-1 ರವರು ಹೇಳಿದಂತಹ ಎಲ್ಲಾ ಪ್ರಕರಣಗಳ ದಾಳಿಯಲ್ಲಿ ನಾನು ಭಾಗವಹಿಸಿದ್ದೇನೆ ಎಂದರೆ ಸರಿಯಲ್ಲ. ಚಿಂದೋಡಿ ಲೀಲಾ ರಂಗ ಮಂದಿರದ ಬಳಿ ಯಾವಾಗಲೂ ಜನಸಂದಣಿ ಇರುತ್ತದೆ ಎಂದರೆ ಸರಿಯಲ್ಲ, ಜನಸಂದಣಿ ಇದ್ದರೂಾ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಒಂದು

ಗಣಪತಿ ದೇವಸ್ಥಾನ ಇದ್ದು ಅಲ್ಲಿ ಒಬ್ಬ ಪೂಜಾರಿ ಇರುತ್ತಾರೆ ಎಂದರೆ ಸರಿಯಲ್ಲ, ಆ ದಿನ ಪೂಜಾರಿ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂಜಾರಿಯ ಮನೆ ದೇವಸ್ಥಾನದ ಬಳಿ ಇದ್ದು ಅವರು ಅಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಿಂದೋಡಿ ಲೀಲಾ ರಂಗ ಮಂದಿರದ ಬಳಿ ಸಿ ಸಿ ಟಿ ವಿ ಇರುತ್ತದೆ ಎಂದರೆ ಆಗ ಇರಲಿಲ್ಲ , ಈ ವಿಷಯ ನಾನು ಸುಳ್ಳು ಹೇಳುತಿದ್ದೇನೇ ಎಂದರೆ ಸರಿಯಲ್ಲ, ಹೈವೇನಿಂದ ದಾವಣಗೆರೆಗೆ ಇಳಿಯುವ ಜಾಗದಲ್ಲಿ ಟ್ರಾಫಿಕ್ ಸಿಗ್ನಲ್ ಇದೆ ಅಂದರೆ ಆಗ ಇರಲಿಲ್ಲ. ಹಾಗೆ ಇರಲಿಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ಮಹಜರ್, ನಿಪಿ23 ಮತ್ತು ನಿಪಿ-13 ರಿಂದ 15 ಒಂದಕ್ಕೊಂದು ತಾಳೆ ಇರುವುದಿಲ್ಲ ಇದಕ್ಕೆ ಸಂಬಂದ ಇಲ್ಲ ಎಂದರೆ ಸುಳ್ಳು. ನಿಪಿ-13 ರಿಂದ 15 ಎಡಿಟ್ ಮಾಡಿದ ಪೋಟೋಗಳು ಎಂದರೆ ಸರಿಯಲ್ಲ. ಆರೋಪಿ-2 ರವರು ನ್ಯಾಯಾಧಿಚೇಶರ ಸಮಕ್ಷಮ ಅಂಗ ಶೋಧನೆ ಮಾಡಲು ಹೇಳಿದರೂ ಸಹ ಅವರನ್ನು ಬೆದರಿಸಿ ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ವಿಷಯವನ್ನು ತಿಳಿಸದೇ ಹೆದರಿಸಿ ಫಾರಂ ನಲ್ಲಿ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಈ ಆರೋಪಿಯಿಂದ ಯಾವುದೇ ಗಾಂಜಾ ಮತ್ತು ಪ್ಯಾಕೇಟ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸುಳ್ಳು. ಚಿಂದೋಡಿ ಲೀಲಾ ರಂಗ ಮಂದಿರದ ಬಳಿ ಯಾುವಾಗಲೂ ಟ್ರಾಫಿಕ್ ಪೋಲೀಸರು ಇದ್ದೇ ಇರುತ್ತಾರೆ ಎಂದರೆ ಆಗ ಇರಲಿಲ್ಲ. ಆಗ ಪೋಲೀಸರು ಇರಲಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೈವೇ ಸ್ಕ್ವಾಡ್ ಇದ್ದೇ ಇರುತ್ತಾರೆ ಎಂದರೆ ಆಗ ಇರಲಿಲ್ಲ, ಹಾಗೆ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಡ್ರಗ್ ನ್ನು ಡ್ರಗ್ ಐಡೆಂಟಿಫಿಕೇಷನ್ ಕಿಟ್ ನಿಂದ ಐಡೆಂಟಿಫಿಕೇಷನ್ ಮಾಡಿರುವುದಿಲ್ಲ ಎಂದರೆ ನಿಜ. ಎಂ.ಓ -1 ರಿಂದ 4 ಮತ್ತು 6 ರಿಂದ 8 ಕ್ಕೆ ಸೀಲು ಕಾಣುತ್ತಿಲ್ಲ ಎಂದರೆ ಅದು ಸ್ಥಳದಲ್ಲಿ ಮಾಡಿದಲ್ಲ ಎನ್ನುತ್ತಾರೆ. ಈ ಆರೋಪಿಯನ್ನು ಕರೆದುಕೊಂಡು ಬಂದು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಲಗಿದೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಪೋಲೀಸ್ ಠಾಣೆಯಲ್ಲಿ ತಯಾರಿಸಿ ಆರೋಪಿಗೆ ಬೆಧರಿಸಿ ಸಹಿ

ಪಡೆಯಲಾಯಿತು ಎಂದರೆ ಸರಿಯಲ್ಲ. ಈ ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.